ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : (486)293
ಸದಸ್ಯರ ಹೆಸರು : ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಬಾಲ್ಕಿ)
ಉತ್ತರಿಸುವ ಸಚಿವರು : (ಶ್ರೀ ಶೋಭಾ ಕರಂದ್ಲಾಜೆ)

ಅ ಭಾಲ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಮೀಣ ನೀರು ಸರಬರಾಜಿನ ಎಷ್ಟು ಯೋಜನೆಗಳು ಕಾರ್ಯಗತಗೊಂಡಿವೆ;

ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 867 ಗ್ರಾಮೀಣ ನೀರು ಸರಬರಾಜು ಯೋಜನೆಗಳು ಕಾರ್ಯಗತಗೊಂಡಿವೆ.

ಆ ಕಳೆದ ಮೂರು ವರ್ಷಗಳಲ್ಲಿ ಇದಕ್ಕಾಗಿ ಪ್ರತಿ ವರ್ಷ ವೆಚ್ಚ ಮಾಡಲಾದ ಹಣವೆಷ್ಟು;

ಈ ಸಲುವಾಗಿ 2005–06ರಲ್ಲಿ ರೂ.93.404 ಲಕ್ಷ, 2006–07ರಲ್ಲಿ ರೂ.31.319ಲಕ್ಷ ಮತ್ತು 2007–08ರಲ್ಲಿ ರೂ.212.265 ಲಕ್ಷ ಅನುದಾನ ವೆಚ್ಚವಾಗಿದೆ.

ಇ ಇದರಿಂದ ಕ್ಷೇತ್ರದ ಯಾವ ಯಾವ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಯ ಲಾಭ ದೊರೆತಿದೆ;

ಪ್ರಯೋಜನ ಪಡೆದಿರುವ 73 ಗ್ರಾಮಗಳ ವಿವರಗಳನ್ನು ಅನುಬಂಧ–1ರಲ್ಲಿ ನಿಡಿದೆ.

ಈ ಈ ಕ್ಷೇತ್ರದ ಇನ್ನೂ ಯಾವ ಯಾವ ಗ್ರಾಮಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ, ಇದರ ಅಂದಾಜು ವೆಚ್ಚವೆಷ್ಟು;

ಕಳೆದ ವರ್ಷ ಭಾಲ್ಕಿ ವಿಧಾನ ಸಭಾ ಕ್ಷೇತ್ರದ 27 ಗ್ರಾಮಗಳ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆಗಾಗಿ ರೂ.600 ಲಕ್ಷ ಅಂದಾಜಿನ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದೆ.

ಉ ಬೀದರ್ ಜಿಲ್ಲೆಗೆ ಪ್ರಸಕ್ತ ಸಾಲಿನಲ್ಲಿ ವಿಶೇಷವಾಗಿ ಬಾಲ್ಕಿ ವಿಧಾನ ಸಭಾ ಕ್ಷೇತ್ರಕ್ಕೆ ಗ್ರಾಮೀಣ ನೀರು ಸರಬರಾಜು ಯೋಜನೆಗಾಗಿ ಎಷ್ಟು ಹಣವನ್ನು ಮೀಸಲಾಗಿಡಲಾಗಿದೆ;

ಪ್ರಸಕ್ತ ಸಾಲಿನ ಕ್ರಿಯಾ ಯೋಜನೆ ಅನುಮೋದನೆ ನಂತರ ಅವಶ್ಯಕತೆಗನುಗುಣವಾಗಿ ಜಿಲ್ಲಾವಾರು ಅನುದಾನವನ್ನು ಹಂಚಿಕೆ ಮಾಡಲಾಗುವುದು.

ಊ ಇದರಿಂದ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು?

ಇದರಿಂದ, ಬೀದರ್ ಜಿಲ್ಲೆಯ ಎಲ್ಲಾ 5–ತಾಲ್ಲೂಕುಗಳಲ್ಲಿ ಗ್ರಾಮೀಣ ನೀರು ಸರಬರಾಜು ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತದೆ.

ಚುಕ್ಕೆರಹಿತ ವಿಧಾನಸಭೆ ಪ್ರಶ್ನೆ ಸಂಖ್ಯೆ:46ರ ಲಗತ್ತು:ಅನುಬಂಧ-1

ಭಾಲ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಯೋಜನೆಯ ಲಾಭ ಪಡೆದಿರುವ ಗ್ರಾಮಗಳ ಪಟ್ಟಿ:-

ಮೊರಂಬಿ, ವರವಟ್ಟಿ(ಬಿ), ಧಾರಜವಾಡಿ, ಬೀರಿ(ಬಿ), ವಾಂಜರಖೇಡ, ಹಲಸಿ(ಎಲ್), ಧಾರಜವಾಡಿ, ಅಳವಯಿ, ಯಂಕುರ, ಕಳಸದಾಳ, ಭಾತುಬ್ರಾ, ಖಿದಾವನಪೂರ, ಖಾನಾಪುರ, ತುಗಾಂವ(ಎಚ್), ಚಿಕಲಚಂದಾ, ಮರೂರ, ಅಟ್ಟರ್ಗಾ, ನಾವದಗಿ, ಕೊಟಗ್ಯಾಳವಾಡಿ, ಗೋದಿಹಿಪ್ಪರ್ಗಾ, ಗುಂಜರ್ಗಾ, ಬೀರಿ(ಬಿ), ತಾಂಡಾ, ವಾಂಜರಖೇಡ, ತಾಂಡಾ, ಸೋಮಪೂರ, ಕೋಂಗಳೆ, ಲಾಧಾ, ಹಾಲಹಿಪ್ಪರ್ಗಾ, ಸೈದಾಪೂರವಾಡಿ, ಗೊರಚಿಂಚೋಳಿ, ವಾಂಜರಖೇಡ, ಬಾಳೂರ ತಾಂಡಾ, ಸಿಕಿಂದ್ರಾಬಾದವಾಡಿ, ಹರಿವಾಡಿ, ಖಾನಾಪೂರ, ತಾಂಡಾ, ಭಾಗ್ಯನಗರ, ಅಳಂದಿ, ಮೂಳಚಾಪೂರ, ಕುರುಬನೆಳಗಿ, ಸೋಮಪೂರ, ಸಿದ್ದೇಶ್ವರ, ಚಳಕಾಪೂರ, ವಾಗಲಗಾಂವ, ತುಗಾಂವ(ಎಚ್) ಇಂಚೂರ, ಸಾಯಿಗಾಂವ, ನಾಗೂರಾ, ಬೊಳೆಗಾಂವ, ವಾಂಡರಿತಾಂಡಾ, ವಾಂಜರಖೇಡ ತಾಂಡಾ, ಬಸವನವಾಡಿ, ಬ್ಯಾಲಹಳ್ಳಿ(ಕೆ), ಬಾಳೂರ ತಾಂಡಾ, ನೀರಮನಳ್ಳಿ, ನೆಳಗಿ, ಸೇವಾನಗರ, ಪಟ್ಟು ತಾಮ್ಡ, ಘಟಾಳಾ ತಾಂಡಾ, ಸಾಯಿಗಾಂವ ತಾಂಡಾ, ರುದನುರ, ಕಪಲಾಪೂರ, ಕೆಸರಜವಳಗಾ, ಹಲಸಿ(ಎಲ್), ಶ್ರೀಮಾಳಿ, ಮೇಹಕರ, ಹಲಬರ್ಗಾ, ಪಾಂಡರಿ, ಗುಂಜರ್ಗಾ, ತರನಳ್ಳಿ, ಧನ್ನೂರಾ, ಬೋಳೆಗಾಂವ, ಮರೂರ, ಕೋಸಮ

ಭಾಲ್ಕಿ ತಾಲ್ಲೂಕಿನ ಡಾ.ನಂಜುಂಡಪ್ಪ ವರದಿ ಆಧಾರಿತ ಯೋಜನೆಯಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಯಲ್ಲಿ (ಪುನಶ್ಚೇತನ) ಕಾಮಗಾರಿಗಳನ್ನು ಕೈಗೊಳ್ಳಲಿರುವ ಗ್ರಾಮಗಳ ಪಟ್ಟಿ

ಸಿದ್ದೇಶ್ವರ, ಕೋಸಮ, ಸೋಮಪುರ, ಖಾಶೆಂಪುರ, ಅಮದಾಬಾದ, ತಲವಾಡ(ಎಂ), ನೆಲವಾಡ, ನಿಟ್ಟೂರ, ಬಾಳೂರ, ಉಚ್ಚಾ, ಕಳಸದಾಳ, ಮಾಳಚಾಪುರ, ನಾರದ ಸಂಗಮ, ಬೀರಿ(ಕೆ), ಗೋದಿಹಿಪ್ಪರಗಾ, ಲಖನಗಾಂವ, ಹಲಬರ್ಗಾ, ಕುರುಬಖೆಳಗಿ, ಖಿಟಕಚಿಂಚೊಳಿ, ಜಮಖಂಡಿ, ಹಲಗೋರ್ಟಾ, ತೆಗಮಪುರ, ಯನಕೂರ, ದಾಡಗಿ, ಚಿರ್ಕಿವಾಡಿ, ಜಾಂಚಿ, ವರವಟ್ಟಿ.

ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾನೀಸ(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 190.ಎಂ.ಸಿಡಿ/2008

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 29.7.2008

ಇವರಿಂದ:–

ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ,
ಬೆಂಗಳೂರು–560 001

ಇವರಿಗೆ:–

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು

ಮಾನ್ಯರೆ,

ವಿಷಯ:– ವಿಧಾನ ಸಭೆಯ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ:487 ಉತ್ತರ ಒದಗಿಸುವ ಬಗ್ಗೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ ರವರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ:.....ಕ್ಕೆ ಉತ್ತರದ 350ಪತ್ರಿಕೆಗಳನ್ನು (ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ) ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಈ ಮೂಲಕ ಕಳುಹಿಸಿ ಕೊಡಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಐ.ಎಫ್.ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ(ಯೋಜನೆ)